

ಚಿತ್ರ: ಎಸ್.ಚಂದ್ರಶೇಖರ್

## 'ಅಭಿವೃದ್ಧಿ'ಯ ಒತ್ತಡ !

ಕೇಂದ್ರದ ಎನ್‌ಡಿಎ ಸರ್ಕಾರ ಮತ್ತು ಕೇರಳ (ಮೊದಲು ಕಾಂಗ್ರೆಸ್ ಮತ್ತು ಈಗ ಸಿಪಿಎಂ) ಸರ್ಕಾರಗಳೆರಡೂ ಈ ಅಭಿವೃದ್ಧಿ ಮಂತ್ರದ ಜಪದಲ್ಲಿ ಮಾತ್ರ ಒಗ್ಗಟ್ಟಿನಿಂದಿವೆ. ಕೊನೆಗೂ ಸರ್ಕಾರ ಎಂದರೆ ಪಕ್ಷಾತೀತ ಪ್ರಭುತ್ವ ತಾನೆ? ಕೇಂದ್ರ ಭೂ ಸಾರಿಗೆ ಸಚಿವಾಲಯ ಮತ್ತು ಕೇರಳ ರಾಜ್ಯ ಸರ್ಕಾರ ಎರಡೂ ಸೇರಿಕೊಂಡು ಈಗ ಸಂಚಾರ ನಿಷೇಧ ರದ್ದು ಮಾಡುವಂತೆ ಕರ್ನಾಟಕ ಸರ್ಕಾರಕ್ಕೆ ಪಟ್ಟು ಹಿಡಿದಿವೆ. ಅಷ್ಟೇ ಸಾಲದೆಂಬಂತೆ ಅಭಿವೃದ್ಧಿಯ ಹೆಸರಿನಲ್ಲಿ ಹೆದ್ದಾರಿ ಅಗಲೀಕರಣ, ಎಲಿವೇಟೆಡ್ ಕಾರಿಡಾರ್ ಪ್ರಸ್ತಾವನೆಯನ್ನು ಮುಂದಿಟ್ಟಿವೆ. ಈ ಎರಡೂ ಒತ್ತಡವನ್ನು ಸಮರ್ಥವಾಗಿ ಎದುರಿಸಿ, ಯಥಾಸ್ಥಿತಿ ಕಾಯ್ದುಕೊಳ್ಳುವುದು ಇದೀಗ ನಮ್ಮ ಕರ್ನಾಟಕ ಸರ್ಕಾರದ ಮುಂದಿರುವ ಸವಾಲು.

"ಒಂದು, ಈ ಸಮಸ್ಯೆಯನ್ನು ನಾವು ವಾಸ್ತವ ನೆಲೆಗಟ್ಟಿನಲ್ಲಿ ನೋಡಬೇಕು. ಎರಡನೆಯದು ಏನೇ ಅಭಿವೃದ್ಧಿ ಮಾಡುವುದಾದರೂ ಪಾರಿಸರಿಕ ಸಮತೋಲನ ಕಾಪಾಡಿಕೊಂಡು ಮಾಡಬೇಕು. ಇಂತಹ ದಟ್ಟ ಕಾಡು ಇರೋದೆ ನಮ್ಮ ದೇಶದ ಭೂ ವಿಸ್ತಾರದ ಶೇಕಡಾ 5 ಭಾಗ ಮಾತ್ರ. ಹೀಗಾಗಿ ಈಗ ಉಳಿದಿರುವ ಕಾಡು ಮತ್ತು ವನ್ಯಜೀವಿ ಸಂಪತ್ತನ್ನು ಕಾಪಾಡಿಕೊಳ್ಳಲೇಬೇಕಿದೆ. ಬಂಡೀಪುರದ ಮಧ್ಯೆ ಹೋಗೋ ಹೆದ್ದಾರಿಯನ್ನೇ ಬಳಸಬೇಕು ಅನ್ನೋ ಹಠ ಯಾಕೆ? ಮತ್ತೆ ನೋಡಿ, ಅಲ್ಲೀಗ ಹಗಲು ಓಡಾಡೋ ಪ್ರಾಣಿಗಳಿಗೂ ಕೂಡ ಕಷ್ಟವೇ. ನನ್ನ ಪ್ರಕಾರ ರಾತ್ರಿ ಮಾತ್ರವಲ್ಲ, ಹಗಲೂ ಕೂಡ ಈ ಹೆದ್ದಾರಿಯನ್ನು ಮುಚ್ಚಿಬಿಡಬೇಕು. ಆ ಹುಣಸೂರು, ಗೋಣಿಕೊಪ್ಪಲು ರಸ್ತೆ ಇದೆಯಲ್ಲ, ಅದು ನಾಗರಹೊಳೆ ಅಂಚಿನಲ್ಲಿ ಸಾಗಿ, ವಯನಾಡು ಕಾಡಿನ ಅಂಚಿನಲ್ಲಿ ಹೋಗುತ್ತೆ. ಆದರೆ ಇದು ಬಂಡೀಪುರದ ಮಧ್ಯೆಯೇ 27 ಕಿ.ಮೀ. ಹೋಗುತ್ತೆ. ಇದಕ್ಕೆ ಹೋಲಿಸಿದರೆ ಆ ರಸ್ತೆಯಲ್ಲಿ ದುಷ್ಪರಿಣಾಮಗಳು ಕಡಿಮೆ, ಅದನ್ನೇ ಇನ್ನಷ್ಟು ಅಭಿವೃದ್ಧಿಪಡಿಸಲಿ, ಎಲಿವೇಟೆಡ್ ಕಾರಿಡಾರ್‌ಅನ್ನು ಅಲ್ಲಿಯೇ ನಿರ್ಮಿಸಲಿ. ಇಲ್ಲಿ ಬೇಡವೇ ಬೇಡ" ಎನ್ನುವುದು ಪರಿಸರವಾದಿ ಸಂಜಯ ಗುಬ್ಬಿಯವರ ಖಡಾಖಂಡಿತ ನಿಲುವು.

'ಹಾಗೆ ನೋಡಿದರೆ ರಾತ್ರಿ ಪೂರ್ಣ ನಿಷೇಧ ಅಂತೇನಿಲ್ಲ, ಅಂಬುಲೆನ್ಸ್ ಮತ್ತು ಶವ ಸಾಗಿಸುವ ವಾಹನವಗಳನ್ನು ಬಿಡುತ್ತಾರೆ. ಮೊನ್ನೆ ಕೇರಳದಲ್ಲಿ ಪ್ರಕೋಪ ಆದಾಗ ರೇಶನ್ ಮತ್ತಿತರ ಸಾಮಗ್ರಿಗಳನ್ನು ಸಾಗಿಸೋದಕ್ಕೆ ರಾತ್ರಿಯೂ ಆಸ್ಪದ ಮಾಡಿಕೊಡಲಾಗಿತ್ತು. ಅಲ್ಲದೇ ಗೇಟ್ ಹಾಕಿದ ಮೇಲೆ ಕೇರಳ ಡಿಪೋದ ಎರಡು ಬಸ್ಸು, ಕರ್ನಾಟಕ ಡಿಪೋದ ಎರಡು ಬಸ್ಸುಗಳನ್ನು ಬಿಡುತ್ತಾರೆ. ಅತ್ತ ಊಟಿ ಕಡೆಯೂ ಗೇಟ್ ಹಾಕಿದ ಮೇಲೆ ನಮ್ಮ ಡಿಪೋದ ಎರಡು ಬಸ್ಸು, ತಮಿಳುನಾಡು ಡಿಪೋದು ಎರಡು ಬಸ್ಸುಗಳನ್ನು ಬಿಡುತ್ತಾರೆ. ಪ್ರಯಾಣಿಕರು ಕೂಡ ಇದಕ್ಕೆ ಹೊಂದಿಕೊಂಡಿದ್ದಾರೆ, ಹೀಗಿದ್ದಾಗ ಈಗ ಯಾಕೆ ಕೇರಳದೊಂದಿಗೆ ಕೇಂದ್ರವೂ ಸೇರಿ ಒತ್ತಡ ಹೇರುವುದು?' ಎನ್ನುವುದು

